ಪಿ.ಡಬ್ಲು 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 03-02-2023.

**ಮುಂದುವರೆದ ಪಾಟೀಸವಾಲುಃ** 2 ಮತ್ತು 3 ನೇ ಪ್ರತಿವಾದಿಯರ ಪರ ಶ್ರೀ ಐ ಎಮ್ ಎನ್ ವಕೀಲರಿಂದಃ

1 ನೇ ಪ್ರತಿವಾದಿ ಗಂಡ ಕೊಗ್ಗ ವಾದಿ ಗಣಪಯ್ಯ ಅಣ್ಣತಮ್ಮಂದಿರು ಎಂದರೆ ಸರಿ. ಮಾರಾಟ ಮಾಡಿದ ದಾವಾ ಆಸ್ತಿಗಳು 1 ನೇ ಪ್ರತಿವಾದಿ ಗಂಡನಿಗೆ ವಾಂಟನಿ ಮೂಲಕ ಬಂದಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಆಕೆಯ ಗಂಡನಿಗೆ ಯಾವುದೇ ಸಂತತಿ ಇಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಗಂಡ ಉಗ್ರಾಣಿ ಕೆಲಸ ಮಾಡುತ್ತಿದ್ದರು. ಆತನಿಗೆ ಉಗ್ರಾಣಿ ಕೆಲಸದಿಂದ ಎಷ್ಟು ಆದಾಯ ಬರುತ್ತಿತ್ತು ಎಂಬುದು ನನಗೆ ಗೊತ್ತಿಲ್ಲ. ಉಗ್ರಾಣಿ ಎಂದು ಗ್ರಾಮ ಪಂಚಾಯತಿನಲ್ಲಿ ಸಹಾಯಕನಾಗಿ ಕೆಲಸ ಮಾಡುವುದ್ಲು. ಆತನಿಗೆ ಸರ್ಕಾರದಿಂದ ಸಂಬಳ ಬರುತ್ತಿತ್ತೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಸದರಿ ಕೊಗ್ಗನಿಗೆ ಉಗ್ರಾಣಿ ಕೆಲಸ ಹೊರತುಪಡಿಸಿ, ಕೃಷಿ ಜಮೀನು ಮಾಡುತ್ತಿದ್ದರು. ಕೊಗ್ಗನಿಗೆ ಆಗಾಗ ಆರೋಗ್ಯ ಸರಿ ಇರುತ್ತಿರಲಿಲ್ಲ ಎಂದರೆ ಸರಿಯಲ್ಲ. ಕೊಗ್ಗ ಯಾವ ಕಾರಣದಿಂದ ಮರಣ ಹೊಂದಿದ್ದಾನೆ ಎಂದರೆ ಸಾಕ್ಷಿ ಸಾರಾಯಿ ಕುಡಿಯುವ ಚಟ ಇತ್ತು ಮತ್ತು ಆಸ್ತಿ ವಿಚಾರದಲ್ಲಿ ಸ್ವಲ್ಪ ಗಲಾಟೆಯಿತ್ತು ಅದರಿಂದ ಮರಣ ಹೊಂದಿದ್ದಾನೆ ಎಂದು ನುಡಿಯುತ್ತಾರೆ. ಕೊಗ್ಗ ತನ್ನ ಆರೋಗ್ಯದ ವೈದ್ಯಕೀಯ ಖರ್ಚು ವ್ಯೆಚ್ಚಗಳನ್ನು ತಾನೇ ನೋಡಿಕೊಳ್ಳುತ್ತಿದ್ದ ಎಂದರೆ ಸಾಕ್ಷಿ ವಾದಿ ತನ್ನ ತಂದೆ ಗಣಪಯ್ಯ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಕೊಗ್ಗ ಸ್ವಲ್ಪ ಸಮಯ ನಮ್ಮೊಂದಿಗೆ ಇದ್ದರು, ನಂತರ ಪ್ರತಿವಾದಿ ಸ್ವಲ್ಪ ದಿನಗಳವರೆಗೆ ನಮೊ್ಮದಿಗೆ ಇದ್ದು 2 ನೇ ಪ್ರತಿವಾದಿ ಮಾತು ಕೇಳಿ ಬೇರೆ ವಾಸ ಮಾಡಲು ಪ್ರಾರಂಭಿಸಿದರು. ಕೊಗ್ಗನಿಗೆ ಅನಾರೋಗವಿತ್ತು ಆತನ ವೈದ್ಯಕೀಯ ಖರ್ಚು ವ್ಯೆಚ್ಚಕ್ಕಾಗಿ ಸಾಲ ಮಾಡಿದ್ದ ಎಂದರೆ ಸರಿಯಲ್ಲ. ಸದರಿ ಕೊಗ್ಗ ಮಾಡಿದ ಸಾಲ ತೀರಿಸುವ ಜವಾಬ್ದಾರಿ 1 ನೇ ಪ್ರತಿವಾದಿ ಮೇಲಿತ್ತು ಅದಕ್ಕಾಗಿ 1 ನೇ ಪ್ರತಿವಾದಿ ಸದರಿ ಸಾಲವನ್ನು ತಿರಿಸುವ ಸಲುವಾಗಿ 2 ಮತ್ತು 3 ನೇ ಪ್ರತಿವಾದಿಯರಿಗೆ ದಾವಾಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿ ದಾವಾಆಸ್ತಿಯನ್ನು ಕ್ರಯಕ್ಕೆ ಪಡೆದುಕೊಂಡ ನಂತರ ಸಾಕಷ್ಟು ಹಣ ಖರ್ಚು ಮಾಡಿ ಜಮೀನನ್ನು ಅಭಿವೃದ್ಧಿಪಡಿಸಿ ಸ್ವಾದೀನದಲ್ಲಿದ್ದಾರೆ ಎಂದರೆ ಸಾಕ್ಷಿ ಸದರಿ ಜಮೀನುಗಳನ್ನು ನಮ್ಮ ಸ್ವಾಧೀನದಲ್ಲಿದೆ ನಾವೇ ಸಾಗುವಳಿ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ಕಾನೂನು ಪ್ರಕಾರ ಕ್ರಯದ ಹಣನೀಡಿ ಕಾನೂನು ಪ್ರಕಾರ ಕ್ರಯಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 2 ಮತ್ತು

3 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಅನಾವಶ್ಯಕವಾಗಿ ಪಕ್ಷಕಾರರನ್ನಾಗಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳಲ್ಲಿ ವಾಂಟನಿ ಆಗಿದ್ದು ನಮಗೆ ಬಂದ ಆಸ್ತಿಯನ್ನು ನಾವು ಮಾರಾಟ ಮಾಡಿದ್ದೇವೆ 1 ನೇ ಪ್ರತಿವಾದಿಗೆ ಬಂದ ಆಸ್ತಿ ಆತನು ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ನಾವು ಮಾರಾಟ ಮಾಡಿದ ಆಸ್ತಿಗೆ 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಕೊಗ್ಗನ ಸಹಿ ಪಡೆದಿಲ್ಲ ಎಂದರೆ ಸಾಕ್ಷಿ ನಾನು ಚಿಕ್ಕವಳಿದ್ದಾಗ ಕೊಗ್ಗ ಮತ್ತು ನನ್ನ ತಂದೆ ಗಣಪಯ್ಯ ಸಾಲ ತಿರಿಸುವದಕ್ಕಾಗಿ ಒಂದು ಜಮೀನನ್ನು ಮಾರಾಟ ಮಾಡಿದ್ದಾರೆ .ತಂದನಂತರ ನಾವು ಯಾವುದೇ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ಈ ದಾವಾಆಸ್ತಿಯ ವಿಚಾರವಾಗಿ ನನಗೆ ಯಾವುದೇ ಸರಿಯಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾಆಸ್ತಿ 1 ನೇ ಪ್ರತಿವಾದಿ ಗಂಡ ಕೊಗ್ಗನಿಗೆ ಸರ್ಕಾರದಿಂದ ಮಂಜೂರಾದ ಆಸ್ತಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯೆಂದಿಗೆ ವಾಸ ಮಾಡುತ್ತಿದ್ದಾರೆ ಎಂದು ವಾದ ಪತ್ರದಲ್ಲಿ ಸುಳ್ಳು ಸೃಷ್ಟಿ ಮಾಡಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಅದೇರೀತಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿ ಮಾತುಕೇಳಿ ದಾವಾಆಸ್ತಿ ಮಾರಾಟ ಮಾಡಿದ್ದಾರೆ ಎಂದು ದಾವಾಪತ್ರದಲ್ಲಿ ಸುಳ್ಳು ಬರೆದಿದ್ದಾರೆ ಎಂದರೆ ಸರಿಯಲ್ಲ. ದಾವಾಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಜಮೀನುಗಳ ಬೆಲೆ ಹೆಚ್ಚಾಗಿರುವುದರಿಂದ ದುರುದ್ದೇಶದಿಂದ ಅವುಗಳನ್ನು ಪಡೆಯುವುದಕ್ಕಾಗಿ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ